**ದಿನಾಂಕ 15-04-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು - ವಾದಿಯರ ಪರ ಶ್ರೀ ಡಿ.ಎಂ.ಎಸ್., ವಕೀಲರಿಂದಃ**

ನಾನು ನನ್ನ ತಾಯಿಯ ಮರಣಾನಂತರ ವಾರೀಸು ನೆಲೆಯಲ್ಲಿ ಈ ದಾವೆಯ ಪಕ್ಷಗಾರಳಾಗಿರುತ್ತೇನೆ. ಬೇರೆ ಯಾವುದೇ ನೆಲೆಯಲ್ಲಿ ನಾವು ಪಕ್ಷಗಾರರಿರುವುದಿಲ್ಲ ಎಂದರೆ ಸರಿ. ನನಗೆ ಈ ದಾವೆಯ ಬಗ್ಗೆ ಮಾಹಿತಿ ಇರುತ್ತದೆ. ನಾನು ವಾದಿಯರು ಹಾಜರುಪಡಿಸಿರುವ ದಾಖಲಾತಿಗಳ ಬಗ್ಗೆ ತಿಳಿದುಕೊಂಡಿರುತ್ತೇನೆ. ಸದರಿಯವರು ಹಾಜರುಪಡಿಸಿರುವ ದಾಖಲಾತಿಗಳ ಬಗ್ಗೆ ನನ್ನ ಆಕ್ಷೇಪ ಇರುತ್ತದೆ. ಎಲ್ಲಾ ಜಾಗಗಳ ಬಗ್ಗೆ ಪಾಲು ಆಗಿದ್ದರೂ ದಾವೆಯ ನೋಟೀಸು ನೀಡಿರುವುದರಿಂದ ನನ್ನ ಆಕ್ಷೇಪ ಇರುತ್ತದೆ. ಅವರು ಹಾಜರುಪಡಿಸಿರುವ ದೃಢೀಕೃತ ದಾಖಲಾತಿಗಳ ಬಗ್ಗೆ ನನ್ನ ಆಕ್ಷೇಪ ಇರುವುದಿಲ್ಲ.

2. ನಾನು ಉಳಿದ ಪ್ರತಿವಾದಿಯರ ಸಾಧನೆಗಳ ಬಗ್ಗೆ ಮಾಹಿತಿ ಇರುತ್ತದೆ. ನಾನು ನನ್ನ ಪರವಾಗಿ ಮಾತ್ರ ಪ್ರಸ್ತುತ ಸಾಕ್ಷ್ಯ ನುಡಿಯುತ್ತಿದ್ದೇನೆ. ಉಳಿದ ಪ್ರತಿವಾದಿಯರ ಪರವಾಗಿ ಸಾಕ್ಷ ನುಡಿಯಲು ನನಗೆ ಅಧಿಕಾರ ಪತ್ರ ಇರುವುದಿಲ್ಲ.

3. ನನ್ನ ಅಜ್ಜಿ ಕಿಟ್ಟಿ ಶೆಡ್ತಿ ಸಲ್ಲಿಸಿರುವ ಡಿಕ್ಲರೇಷನ್ ಅರ್ಜಿಯ ಬಗ್ಗೆ ತಿಳಿದುಕೊಂಡಿರುತ್ತೇನೆ. ಸದರಿ ಅರ್ಜಿ ಸಲ್ಲಿಸುವಾಗ ಅವರಿಗೆ 55 ವರ್ಷ ಪ್ರಾಯವಾಗಿತ್ತು. ಸದರಿ ಅರ್ಜಿಯಲ್ಲಿ ನೂರು ವರ್ಷಗಳಿಂದ ಹಿರಿಯರ ಲಾಗಾಯ್ತು ಸ್ವಾಧೀನಾನುಭವ ಹೊಂದಿರುವುದಾಗಿ ಕಾಣಿಸಲಾಗಿದೆ ಎಂದರೆ ಸರಿ. ಕಿಟ್ಟಿ ಶೆಡ್ತಿ ದಿನಾಂಕ 27-07-1999 ರಲ್ಲಿ ಮೃತ ಪಟ್ಟಿರುತ್ತಾರೆ ಎಂದರೆ ಸರಿ. ಭೂ ನ್ಯಾಯ ಮಂಡಳಿಯಲ್ಲಿ ಮಂಜೂರಾದ ಆಸ್ತಿಯನ್ನು ಕಿಟ್ಟಿ ಶೆಡ್ತಿಯವರೇ ಮೃತಪಡುವ ತನಕ ಅನುಭವಿಸುತ್ತಾ ಬಂದಿದ್ದರು ಎಂದರೆ ಸರಿಯಲ್ಲ, ಸಾಕ್ಷಿ, ಪಾಲು ಮಾಡಿಕೊಂಡು ನಾವೆಲ್ಲಾ ಪ್ರತ್ಯೇಕವಾಗಿದ್ದೇವೆ ಎನ್ನುತ್ತಾರೆ. ನನ್ನ ಪ್ರಕಾರ ಬಾಯಿ ಮಾತಿನಲ್ಲಿ ಪಾಲು ವಿಂಗಡಣೆ ಆಗಿತ್ತು. ಆಗಸ್ಟ 1974 ರಲ್ಲಿ ಸದರಿ ಪಾಲು ವಿಂಗಡಣೆ ಆಗಿದ್ದು, 1975 ರಲ್ಲಿ

ಕರಾರು ಆಗಿರುತ್ತದೆ ಎನ್ನುತ್ತಾರೆ. ಸದರಿ ಬಾಯಿ ಮಾತಿನ ಪಾಲು ವಿಂಗಡಣೆ ಆಗುವಾಗ ಕಿಟ್ಟಿ ಶೆಡ್ತಿ, ಆಕೆಯ ಅಣ್ಣ ಶಾಮ, ಕಿಟ್ಟಿ ಶೆಡ್ತಿಯ ಎಲ್ಲಾ ಮಕ್ಕಳು ಹಾಗೂ ಭೂ ಮಾಲೀಕರಾದ ರಂಗಣ್ಣ ಭಟ್ಟರು ಇದ್ದರು.

4. ಕಿಟ್ಟಿ ಶೆಡ್ತಿಯವರಿಗೆ ಒಟ್ಟು 07 ಜನ ಮಕ್ಕಳು. ಅವರುಗಳೆಂದರೆ ವಾದಿ ನಂಬ್ರ-1 ಶಿವರಾಮ ಶೆಟ್ಟಿ, ವಾದಿ ನಂಬ್ರ-2 ಸುಶೀಲ ಶೆಟ್ಟಿ, ಪ್ರತಿವಾದಿ ನಂಬ್ರ-1 ರಿಂದ 3, ಶಂಕರ ಶೆಟ್ಟಿ, ಗಿರಿಜ ಶೆಟ್ಟಿ ಇರುತ್ತಾರೆ. 1974 ರಲ್ಲಿ ಬಾಯಿ ಮಾತಿನ ಪಾಲು ಮಾಡಿಕೊಳ್ಳುವಾಗ ಕರಾರು ಮಾಡಿಕೊಳ್ಳಲು ತೊಂದರೆ ಇರಲಿಲ್ಲ. ಪಾಲು ವಿಂಗಡಣೆ ಮಾಡಲು 3 ನೇ ಪ್ರತಿವಾದಿ ರಾಧು ಶೆಡ್ತಿ ಹಾಗೂ ಇನ್ನೋರ್ವ ಮಗಳಾದ ಗಿರಿಜ ಶೆಟ್ಟಿ ಕೇಳಿಕೊಂಡಿದ್ದರು. ಸದರಿ ಪಾಲು ಮಾಡುವ ಸಮಯ ಗೇಣಿ ಆಸ್ತಿ ಕಿಟ್ಟಿ ಶೆಡ್ತಿಯ ಸ್ವಾಧೀನದಲ್ಲಿ ಇತ್ತು. ಕಿಟ್ಟಿ ಶೆಡ್ತಿಯಿಂದ ಸೋಡಾ ಚೀಟಿ ಪಡೆದು ನಂತರ ಭೂ ಮಾಲೀಕರು ಪಾಲು ವಿಂಗಡಣೆ ಮಾಡಿಕೊಟ್ಟಿರುವುದಿಲ್ಲ. ಹಾಗಾಗಿ ಗೇಣಿ ಆಸ್ತಿ ಕಿಟ್ಟಿ ಶೆಡ್ತಿಯ ಬಳಿಯೇ ಇತ್ತು ಎಂದರೆ ಸಾಕ್ಷಿ, ಬಾಯಿ ಮಾತಿನ ಪಾಲು ಅದ ನಂತರ ಆಸ್ತಿ ವಿಂಗಡಣೆ ಆಗಿದೆ ಎನ್ನುತ್ತಾರೆ.

5. ಸಂಪೂರ್ಣ ದಾವಾ ಆಸ್ತಿ ಭೂ ಮಾಲೀಕರಾದ ರಂಗಣ್ಣ ಭಟ್ಟರ ಆಸ್ತಿ ಎಂದರೆ ಸರಿ. ಪಾಲು ವಿಂಗಡಣೆ ಆಗಿದ್ದ ಪಕ್ಷದಲ್ಲಿ ಎಲ್ಲಾ ಪಾಲುದಾರರು ಪ್ರತ್ಯೇಕವಾಗಿ ಡಿಕ್ಲರೇಷನ್ ಅರ್ಜಿ ಸಲ್ಲಿಸಬೇಕಾಗಿತ್ತು ಎಂದರೆ ಸಾಕ್ಷಿ, 3 ನೇ ಪ್ರತಿವಾದಿ ರಾಧು ಶೆಡ್ತಿ ಹಾಗೂ ಗಿರಿಜ ಶೆಡ್ತಿ ಅರ್ಜಿ ಸಲ್ಲಿಸಿದ್ದಾರೆ. ಉಳಿದವರು ಯಾಕೆ ಸಲ್ಲಿಸಿಲ್ಲ ಎಂದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಪಾಲು ವಿಂಗಡಣೆ ಬಗ್ಗೆ 1975 ರಲ್ಲಿ ಕರಾರು ಆಗಿದೆ, ದಿನಾಂಕ ನೆನಪಿಲ್ಲ. ಸಾಕ್ಷಿಗೆ ನಿಡಿ.2 ಕರಾರನ್ನು ತೋರಿಸಲಾಗಿ, ಅದರ ಬಗ್ಗೆ ನನಗೆ ಮಾಹಿತಿ ಇದೆ ಎನ್ನುತ್ತಾರೆ. ನನ್ನ ಪ್ರಕಾರ ನಿಡಿ.2 ರ ಸಮಯ ಕಿಟ್ಟಿ ಶೆಡ್ತಿಯ ಎಲ್ಲಾ ಮಕ್ಕಳು ಹಾಜರಿದ್ದರು. ಸಾಕ್ಷಿದಾರರು ಸದರಿ ದಾಖಲಾತಿಯ ಸಹಿಗಳನ್ನು ಪರಿಶೀಲಿಸಿ, 1 ನೇ ವಾದಿ ಶಿವರಾಮ ಶೆಟ್ಟಿ ಸಹಿ ಮಾಡಿಲ್ಲ ಎಂದು ಹೇಳುತ್ತಾರೆ. ನಿಡಿ.2 ರ ನಂತರ ಎಲ್ಲಾ ಹಿಸ್ಸಾದಾರರು ಪ್ರತ್ಯೇಕ ಸ್ವಾಧೀನ ಹೊಂದಿದ್ದರು. 1 ನೇ ವಾದಿ ಸದರಿ ನಿಡಿ.2 ರಲ್ಲಿ

ಕಾಣಿಸಿದ ತನ್ನ ಪಾಲಿನ ಆಸ್ತಿಯ ಸ್ವಾಧೀನ ಹೊಂದಿರುತ್ತಾನೆ. ನಿಡಿ.2 ರ ಪ್ರಕಾರ ಕಿಟ್ಟಿ ಶೆಡ್ತಿಗೆ ಎಷ್ಟು ವಿಸ್ತೀರ್ಣದ ಆಸ್ತಿಯನ್ನು ನೀಡಲಾಗಿದೆ ಎಂದು ನನಗೆ ಗೊತ್ತಿಲ್ಲ.

6. ನಿಡಿ.2 ರ ಪೂರ್ವದಲ್ಲಿಯೇ ಕಿಟ್ಟಿ ಶೆಡ್ತಿ ಭೂ ನ್ಯಾಯ ಮಂಡಳಿಗೆ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ. ಕಿಟ್ಟಿ ಶೆಡ್ತಿಗೆ ಒಂಬತ್ತು ಆಸ್ತಿಗಳ ಬಗ್ಗೆ ಅದಿಭೋಗದಾರಿಕೆ ಹಕ್ಕು ಪ್ರಾಪ್ತವಾಗಿದೆ ಎಂದರೆ ಇರಬಹುದು. ನಿಪಿ.3 ಭೂ ನ್ಯಾಯ ಮಂಡಳಿ ಆದೇಶವನ್ನು ಸಾಕ್ಷಿದಾರರು ನೋಡಿ ಒಪ್ಪಿಕೊಳ್ಳುತ್ತಾರೆ. ಕಿಟ್ಟಿ ಶೆಡ್ತಿಗೆ ಅಂದಾಜು 13-14 ಎಕರೆ ಆಸ್ತಿ ಮಂಜೂರು ಆಗಿರಬಹುದು. ನಿಡಿ.2 ರ ಪ್ರಕಾರ ಕಿಟ್ಟಿ ಶೆಡ್ತಿಗೆ ಐದು ಆಸ್ತಿಗಳು ಮಾತ್ರ ವಿಂಗಡಿಸಲಾಗಿದೆ ಎಂದರೆ ಸಾಕ್ಷಿ, ದಾಖಲಾತಿಯನ್ನು ನೋಡಿ ಒಪ್ಪಿಕೊಂಡಿರುತ್ತಾರೆ. ಸದರಿ ಕಿಟ್ಟಿ ಶೆಡ್ತಿಗೆ ವಿಂಗಡಿಸಲಾಗಿದ್ದ ಆಸ್ತಿಗಳು ಪ್ರಸ್ತುತ ನಮ್ಮ ಸ್ವಾಧೀನದಲ್ಲಿ ಇರುತ್ತದೆ. ಕಿಟ್ಟಿ ಶೆಡ್ತಿಯ ಮರಣಾನಂತರ ಆಕೆಯ ಅದಿಭೋಗದಾರಿಕೆ ಹಕ್ಕಿನ ಆಸ್ತಿಗಳು ಪಾಲು ಆಗಿರುವುದಿಲ್ಲ. ಸದರಿ ಆಸ್ತಿಯಲ್ಲಿ ಎಲ್ಲಾ ಮಕ್ಕಳಿಗೆ ಪಾಲು ಇದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು, ಕಿಟ್ಟಿ ಶೆಡ್ತಿ ಪಾಲು ಮಾಡಿಕೊಳ್ಳಲು ಹೇಳಿಲ್ಲ ಎನ್ನುತ್ತಾರೆ. ಹಾಗಾಗಿ ನಾವು ಪಾಲು ಮಾಡಿಕೊಂಡಿರುವುದಿಲ್ಲ.

7. ನಿಡಿ.2 ಕರಾರಿನಲ್ಲಿ ಕಾಣಿಸಿರುವ ಆಸ್ತಿಗಳು ಕಿಟ್ಟಿ ಶೆಡ್ತಿಗೆ ಭೂ ನ್ಯಾಯ ಮಂಡಳಿಯಿಂದ ಮಂಜೂರಾಗಿರುತ್ತದೆ ಎಂದರೆ ಸಾಕ್ಷಿ ಮೊದಲೇ ಪಾಲು ವಿಂಗಡಣೆ ಆಗಿತ್ತು ಎನ್ನುತ್ತಾರೆ. ಕಿಟ್ಟಿ ಶೆಡ್ತಿ, ಗಿರಿಜ ಹಾಗೂ ರಾಧು ಶೆಡ್ತಿ ಹೊರತುಪಡಿಸಿ ಬೇರೆ ಯಾರೂ ಭೂ ನ್ಯಾಯ ಮಂಡಳಿಗೆ ಅರ್ಜಿ ಸಲ್ಲಿಸಿಲ್ಲ ಎಂದರೆ ಸರಿ. ದಾವಾ ಆಸ್ತಿಯಲ್ಲಿ ಪ್ರತಿವಾದಿ ನಂಬ್ರ-1 ರಿಂದ 3 ರವರನ್ನು ಹೊರತುಪಡಿಸಿ ಕಿಟ್ಟಿ ಶೆಡ್ತಿಯ ಉಳಿದ ಮಕ್ಕಳು ಮನೆ ಕಟ್ಟಿ ವಾಸ್ತವ್ಯ ಮಾಡಿಲ್ಲ ಎಂದರೆ ಸರಿ.

8. ಗಿರಿಜ ಹಾಗೂ ರಾಧು ಶೆಡ್ತಿ ಭೂ ನ್ಯಾಯ ಮಂಡಳಿಗೆ ಸಲ್ಲಿಸಿದ ಅರ್ಜಿಯಲ್ಲೂ ಕೂಡ ಹಿರಿಯರ ಲಾಗಾಯ್ತು ನೂರು ವರ್ಷಗಳಿಂದ ಸ್ವಾಧೀನಾನುಭವ ಹೊಂದಿರುವುದಾಗಿ ಕಾಣಿಸಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಆ ಪ್ರಕಾರ ಭೂ ನ್ಯಾಯ

ಮಂಡಳಿ ಸದರಿಯವರಿಗೆ ಆಸ್ತಿ ಮಂಜೂರು ಮಾಡಿದೆ ಎಂದರೆ ಸಾಕ್ಷಿ, ಮೊದಲೇ ಧಣಿಯವರು ಪಾಲು ವಿಂಗಡಣೆ ಮಾಡಿದ್ದಾರೆ ಎನ್ನುತ್ತಾರೆ. ಆ ರೀತಿ ಧಣಿಯವರು ಪಾಲು ವಿಂಗಡಣೆ ಮಾಡುವಾಗ ಗೇಣಿಯ ಬಾಬ್ತು ಪ್ರತ್ಯೇಕ ಗೇಣಿಯನ್ನು ನಿಗದಿ ಮಾಡಿರುವುದಿಲ್ಲ. ಕಿಟ್ಟಿ ಶೆಡ್ತಿಯವರೇ ರೂ.80/- ಗೇಣಿ ಹಾಗೂ 37 ಮುಡಿ ಅಕ್ಕಿಯನ್ನು ಪಾವತಿ ಮಾಡುತ್ತಿದ್ದರು ಎಂದರೆ ಸರಿ. ಭೂ ನ್ಯಾಯ ಮಂಡಳಿ ಸಮಕ್ಷಮ ನಿಡಿ.2 ಕರಾರು ಹಾಗೂ ಪಾಲಿನ ದಾಖಲಾತಿಯನ್ನು ಸಲ್ಲಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಡಿ.2 ಕರಾರು ಆದ ಬಳಿಕವೇ ಗಿರಿಜ ಹಾಗೂ ರಾಧು ಶೆಡ್ತಿ ಭೂ ನ್ಯಾಯ ಮಂಡಳಿಗೆ ಅರ್ಜಿ ಸಲ್ಲಿಸಿರುತ್ತಾರೆ ಎಂದರೆ ಸರಿ.

9. ನಿಡಿ.3 ಕ್ರಯದ ಕರಾರು ವೇಳೆ ಕ್ರಯ ಸಾಧನ ಬರೆದುಕೊಡಬಾರದು ಎಂಬ ಷರತ್ತಿನ ಅವಧಿ ಇತ್ತು ಎಂದರೆ ಸರಿ. 2 ನೇ ವಾದಿ ಒತ್ತಾಯ ಪೂರ್ವಕವಾಗಿ ನನಗೆ ಜಾಗದ ಅವಶ್ಯಕತೆ ಇಲ್ಲದಿದ್ದರೂ ನಿಡಿ.3 ಪ್ರಕಾರ ಕ್ರಯದ ಕರಾರು ಬರೆಸಿಕೊಂಡಿದ್ದರು. ಸದರಿ ಕರಾರನ್ನು 2 ನೇ ವಾದಿಯೇ ತಯಾರಿಸಿ ತಂದಿದ್ದಳು. ಸದರಿ ಕರಾರನ್ನು 60 ಹಾಗೂ 70 ಸೆಂಟ್ಸ್ ಆಸ್ತಿಗಳ ಬಗ್ಗೆ ತಯಾರಿಸಲಾಗಿತ್ತು. ಆಗ ಸೆಂಟ್ಸಿಗೆ ಅಂದಾಜು ರೂ.100-200/- ನ್ನು ಕ್ರಯದ ಮೊತ್ತವಾಗಿ ನಿಗದಿಪಡಿಸಲಾಗಿತ್ತು. ನಾನು ಕ್ರಯದ ಮೊತ್ತವನ್ನು ನಗದಾಗಿ ಪಾವತಿ ಮಾಡಿರುತ್ತೇನೆ. ಸದರಿ ಕರಾರನ್ನು ಸರ್ವೆ ನಂಬ್ರ-181 ರಲ್ಲಿ 70 ಸೆಂಟ್ಸ್ ಹಾಗೂ ಸರ್ವೆ ನಂಬ್ರ-82 ರಲ್ಲಿ 60 ಸೆಂಟ್ಸ್ ಗೆ ಮಾಡಲಾಗಿತ್ತು. ಸದರಿ ಕರಾರು ಮಾಡುವ ಸಮಯ 2 ನೇ ವಾದಿಯ ಹೆಸರು ಆಸ್ತಿ ದಾಖಲಾತಿಗಳಲ್ಲಿ ನಮೂದಾಗಿತ್ತೇ ಎಂದರೆ ಸಾಕ್ಷಿ, ಇದ್ದಿರಬಹುದು ಎನ್ನುತ್ತಾರೆ. ಸದರಿ ದಾಖಲಾತಿಯನ್ನು ನಾನು ನೋಡಿರುವುದಿಲ್ಲ. ನಿಡಿ.3 ರ ಪೂರ್ವದಲ್ಲಿ ದಾಖಲಾತಿಗಳನ್ನು ದಸ್ತು ಬರಹಗಾರರಾದ ವಾಸುದೇವ ಐತಾಳ್ ನೋಡಿರುತ್ತಾರೆ. ಸರ್ವೆ ನಂಬ್ರ-181 ನ್ನು 2 ನೇ ವಾದಿಯ ಹಿಸ್ಸೆಗೆ ನಿಡಿ.2 ಕರಾರಿನಲ್ಲಿ ವಿಂಗಡಿಸಿಲ್ಲ ಎಂದರೆ ಸರಿ. ನಿಡಿ.3 ಕರಾರನ್ನು ತಯಾರಿಸಲು 2 ನೇ ವಾದಿಯೇ ಮಾಹಿತಿ ನೀಡಿದ್ದರು. ಅದಕ್ಕೆ ಕಿಟ್ಟಿ ಶೆಡ್ತಿಯ ಅಣ್ಣ ಶಾಮ ಶೆಟ್ಟಿ ಹಾಗೂ ನನ್ನ ಗಂಡ ರವೀಂದ್ರ ಶೆಟ್ಟಿ ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ.

10. ನಿಡಿ.2 ಕರಾರಿನಲ್ಲಿ ವಾದಿಯರಾದ ಶಿವರಾಮ ಹಾಗೂ ಸುಶೀಲರವರ ಸಹಿ ಇರುವುದಿಲ್ಲ ಎಂದರೆ ಸಾಕ್ಷಿ, 2 ನೇ ವಾದಿ ಸಹಿ ಮಾಡಿದ್ದಾಳೆ ಎನ್ನುತ್ತಾರೆ. ನಿಪಿ.2 ಕರಾರನ್ನು ಈ ನ್ಯಾಯಾಲಯದಲ್ಲಿ ಹಾಜರುಪಡಿಸುವ ಪೂರ್ವದಲ್ಲಿ ಬೇರೆ ಎಲ್ಲಿಯೂ ಹಾಜರುಪಡಿಸಿರುವುದಿಲ್ಲ. ನಿಡಿ.2 ನ್ನು ನಂತರ ನೋಂದಾವಣೆ ಮಾಡಿಸಿರುವುದಿಲ್ಲ. ನಿಡಿ.2 ರ ಬಗ್ಗೆ ಸಮ್ಮತಿಯನ್ನು ದಾಖಲೆ ಮುಖಾಂತರ 1 ನೇ ವಾದಿ ಶಿವರಾಮ ಶೆಟ್ಟಿಯವರಿಂದ ಪಡೆದುಕೊಂಡಿರುವುದಿಲ್ಲ. ನಿಡಿ.2 ರಂತೆ ಯಾವುದೇ ರೀತಿ ಪಾಲು ವಿಂಗಡಣೆ ಆಗಿಲ್ಲ ಹಾಗೂ ಅದಕ್ಕಿಂತ ಪೂರ್ವದಲ್ಲಿ ಬಾಯಿ ಮಾತಿನ ಕರಾರು ಕೂಡ ಆಗಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ನಿಡಿ.3 ಕರಾರಿನಲ್ಲಿ ಕೂಡ 2 ನೇ ವಾದಿ ಸುಶೀಲರವರ ಸಹಿ ಇರುವುದಿಲ್ಲ ಎಂದರೆ ಸರಿಯಲ್ಲ. ನಿಡಿ.3 ನ್ನು ಕೂಡ ಈ ನ್ಯಾಯಾಲಯದಲ್ಲಿ ಹಾಜರುಪಡಿಸುವ ಪೂರ್ವದಲ್ಲಿ ಬೇರೆ ಎಲ್ಲಿಯೂ ಹಾಜರುಪಡಿಸಿರುವುದಿಲ್ಲ. ನಿಡಿ.3 ಕ್ರಯದ ಕರಾರಿನ ಬಾಬ್ತು ಲಿಖಿತವಾಗಿ ಕ್ರಮ ಕೈಗೊಂಡಿಲ್ಲ, ಬಾಯಿ ಮಾತಿನಲ್ಲಿ ಕೇಳಿಕೊಂಡಿದ್ದೇನೆ. ನಿಡಿ.2 ಮತ್ತು 3 ನ್ನು ಈ ಕೇಸಿಗಾಗಿ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ನಿಡಿ.3 ರಲ್ಲಿ ನಮೂದಿಸಿದ ಆಸ್ತಿಗಳ ಬಗ್ಗೆ ಸದರಿ ಕರಾರು ಹೊರತುಪಡಿಸಿ ಬೇರೆ ದಾಖಲೆ ಮಾಡಿಕೊಂಡಿಲ್ಲ. ನಿಡಿ.2 ಮತ್ತು 3 ರಲ್ಲಿ ಎಲ್ಲಾ ಪುಟಗಳಲ್ಲಿ ಸಹಿ ಇಲ್ಲದೇ ಇರುವ ಕಾರಣ ಸದರಿ ದಾಖಲಾತಿ ಯಾರನ್ನೂ ಬಂಧೀಕರಿಸುವುದಿಲ್ಲ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸ ಇದೆ ಎಂದು ಒಪ್ಪಿದರು

ಪ್ರ. ಹಿ. ಸಿ. ನ್ಯಾ. ಉಡುಪಿ.